ಕಾಡಲ್ಲಿದ್ದಿದ್ದರೆ ಪ್ರಾಣಿಗಳ ಥರ ಬದುಕಬಹುದಿತ್ತು. ನೀನು ಈ ಸಮಾಜದಲ್ಲಿ ಇರುವಾಗ ಇಲ್ಲಿಯ ಹಾಗೆ ಬಾಳಬೇಕು ತಾನೇ...?" ಗೋರಕನಾಥ ಅನುನಯದ ಸ್ವರದಲ್ಲೆಂದ.

"ನನ್ಗೆ ಈ ಸಮಾಜವೇ ಬೇಡ?" ಕಾಯಕನಾಥ ಅಸಹನೆಯಿಂದ ನುಡಿದ.

"ಬೇಡ ಅಂದ್ರೆ ಎಲ್ಲಿಗೆ ಹೋಗ್ತೀಯಾ...? ಏನು ಮಾಡ್ತೀಯಾ...?"

"ಹೋದವರ ಹಿಂದೆ ಅಳ್ತಾ ಕೊರಗಿ ಕೂತರೆ, ನಮ್ಮ ದಿನ ನಡೆಯುತ್ತದೆಯೇನು? ನೀನೇ ನಿನ್ನ ಕೈಯಾರೆ ಹಾಳು ಮಾಡಿಕೊಂಡ ಬದುಕು ಇಲ್ಲಿದ್ದಿದ್ರೆ ನಾವೇ ಒಂದು ಹುಡುಗಿ ನೋಡಿ ನಿನ್ನ ಮದ್ವೆ ಮಾಡ್ತಿದ್ವಿ... ಈಗ ನೋಡು... ಎಂಥಾ ಅವಸ್ಥೆ ತಂದುಕೊಂಡೆ ಎಂದು? ಈಗಲೂ ಕಾಲ ಮಿಂಚಿಲ್ಲ ಸಣ್ಣ ವಯಸ್ಸು ನಿನ್ನದು ಮತ್ತೆ ಬದುಕು ಕಟ್ಟಿಕೋ ಪುನಃ ಸಂಸಾರದ ಬಂಡಿ ಹೂಡು. ನಮ್ಮೆಲ್ಲರಂತೆ ಸಮಾಜದಲ್ಲಿ ಬಾಳು" ಅಣ್ಣ ಉಪದೇಶಿಸಿದ.

"ಏನು ಕೊಡ್ತು ಈ ಸಮಾಜ ನನಗೆ? ಬರೀ ನೋವು ಸಂಕಟ... ನನ್ನಿಂದ ನನ್ನ ಹೆಂಡತಿ ಮಗೂನ್ನ ಕಿತ್ತುಕೊಂಡಿತು. ನನ್ಗೆ ಇದ್ಯಾವುದೂ ಬೇಡ... ನಾನು ಇಲ್ಲಿ ಇರಲ್ಲ" ಎಂದು ಕಾಯಕನಾಥ ವಿಷಾದದಿಂದ ನುಡಿದವನು, ತತ್‌ಕ್ಷಣ ಮಾತ್ರದಲ್ಲಿ ಅವನ ಮುಖಭಾವ ಬದಲಾಯಿತು. ಆವೇಶ ಬಂದವನಂತೆ ಎದ್ದವನು, ನಿಂತ ಕಾಲಲ್ಲಿ ಹೊರಟ.

ಅವನ ಅಣ್ಣಂದಿರು ಬಂದು ಅವನನ್ನು ತಡೆಯಲೆತ್ನಿಸಿದರು. ಕಾಯಕನಾಥ ಅವರ ಕೈ ಕೊಡವಿ ಅವರಿಗೆ ವಿಮುಖವಾಗಿ ಹೆಜ್ಜೆ ಹಾಕತೊಡಗಿದ.

"ಕಾಯ ನಿಲ್ಲು ಎಲ್ಲಿಗೆ ಹೋಗ್ತಿದ್ಯಾ ನಿನ್ನನ್ನು ಮಾತನಾಡಿಸಲು ನಾವೆಲ್ಲಾ ಬಂದಿದ್ದೇವೆ ನೀನೆಲ್ಲಿಗೆ ಹೊರಟಿರುವೆ..? ಇಲ್ಲಿ ಕೂತು ನಮ್ಮೊಂದಿಗೆ ಮಾತನಾಡು'' ಅವನ ಅಣ್ಣ ಕೂಗಿ ಹೇಳಿದ. ಕಾಯಕನಾಥ ಆ ಮಾತು ತನಗೆ ಆಲಿಸಲೇ ಇಲ್ಲವೇನೋ ಎಂಬಂತೆ, ಜಡನಾಗಿ ಅಲ್ಲಿಂದ ಸಾಗತೊಡಗಿದ. ಅವರು ಕರೆಯುತ್ತಲೇ ಇದ್ದರು.

ಕಾಯಕನಾಥನ ಮನಸ್ಥಿತಿಯ ಅರಿವಿದ್ದ ಅವರು, ಆತ ತಿರುಗಾಡಿ ಮನದ ಕುದಿ ಶಮನಗೊಂಡ ಬಳಿಕ ಮರಳಿ ಬರಬಹುದೆಂಬ ಊಹೆಯಿಂದ ಅವನಷ್ಟಕ್ಕೆ ಬಿಟ್ಟು ಬಿಟ್ಟರು. ಅಲ್ಲಿಂದ ನಡೆದ ಕಾಯಕನಾಥ ಬಸ್ಸು ನಿಲ್ದಾಣಕ್ಕೆ ಬಂದವನು ಬಸ್ಸು ಹತ್ತಿ, ನೇರವಾಗಿ ರೈಲು ನಿಲ್ದಾಣಕ್ಕೆ ಬಂದಿಳಿದ. ಕರ್ನಾಟಕದ ಕಡೆಗಿನ ರೈಲು ಹೊರಡಲು ಸಿದ್ಧವಾಗಿ ನಿಂತಿತ್ತು. ಟಿಕೇಟು ಕೂಡಾ ಮಾಡದೇ ಹತ್ತಿ ಕುಳಿತುಬಿಟ್ಟ. ಎಕ್ಸ್‌ಪ್ರೆಸ್ ಟ್ರೈನು ಬಿಲ್ಲಿನಿಂದ ಬಿಟ್ಟ ಬಾಣದಂತೆ ಶರವೇಗದಲ್ಲಿ ಆ ನಿಲ್ದಾಣದಿಂದ ಹೊರಟಿತ್ತು.

ಒಂದಿಡೀ ರಾತ್ರಿ, ಮತ್ತೊಂದು ಹಗಲು ಹಾಗೇ ಗರಬಡಿದವನಂತೆ ಎರಡು ಬೋಗಿಗಳ ನಡುವಿನ ಶೌಚದ ಬಳಿ ಕುಳಿತಿದ್ದ ಕಾಯಕನಾಥ. ಅದರ ಕೆಟ್ಟ ವಾಸನೆಯೂ ಸಹ ಬಾಧಿಸದಷ್ಟು ಮನಸ್ಸು ಜಡವಾಗಿತ್ತು. ಶೂನ್ಯವಾಗಿತ್ತು.

'ಬದುಕೆಂದರೆ ಇಷ್ಟೇ... ಸಂಬಂಧಗಳೆಂದರೆ ಇಷ್ಟೇ...' ಇಡೀ ಚಿತ್ರಣ ಕಣ್ಮುಂದೆ ಸುಳಿದು ಯಾವುದೂ ಬೇಡವೆನಿಸಿ ಒಂದು ನಿರ್ವಾತ ಅವನೊಳಗೆ ಸೃಷ್ಟಿಯಾಗಿತ್ತು.

ಟಿ.ಟಿ. ಬಂದು ಟಿಕೆಟ್ ವಿಚಾರಿಸಿದಾಗ ತಲೆಕೊಡವಿದ. ಕೈಯಲ್ಲಿ ಹಣವೂ ಇರಲಿಲ್ಲ. ಏನೋ ಕ್ರುದ್ಧ ಭಾವದಲ್ಲಿ ಹೊರಟು ಬಂದದ್ದಾಗಿತ್ತು. ಹಣವಿಲ್ಲ ಎಂದು ಸಂಜ್ಞೆ ಬಾಷೆಯಲ್ಲಿ ಉತ್ತರಿಸಿದ. ಟಿ.ಟಿ. ಸಿಟ್ಟಿನಿಂದ, "ಮುಂದಿನ ಸ್ಟೇಶನ್ ನಲ್ಲಿ ಇಳಿ..." ಎಂದು ಗದರಿಸಿ ಮುಂದೆ ಹೋದ. ರೈಲು ಆಗಲೇ ಕರ್ನಾಟಕದದ ಗಡಿಯೊಳಗೆ ಬಂದಾಗಿತ್ತು.

ಉತ್ತರಕನ್ನಡದ ಯಾವುದೋ ನಿಲ್ದಾಣದಲ್ಲಿ ರೈಲು ನಿಂತಿತು. ಕಾಯಕನಾಥ ಅದರಿಂದ ಕೆಳಗಿಳಿದವನು ಮೊದಲು ಎದುರಿಗೆ ಕಂಡ ನಲ್ಲಿಯಿಂದ ದಣಿವು, ಹಸಿವು ತೀರಿಸಿಕೊಂಡ. ಅವನು ಬಂದ ರೈಲು, ನಿಲ್ದಾಣ ಬಿಟ್ಟು ಹೊರಟಾಗ ಅಲ್ಲಿನ ಜನರ ಗದ್ದಲ ಒಮ್ಮೆಗೇ ಕರಗಿ ಸ್ಥಿತಿ ಶಾಂತವಾಗಿತ್ತು.

ತಾನೇನೋ ನಿಲ್ದಾಣದಲ್ಲಿ ಕುಳಿತಿರುವೆ, ಆದರೆ ಮನಸ್ಸಿಗೆ ನಿಲ್ದಾಣವೆನ್ನುವುದು ಎಲ್ಲಿದೆ...? ಅದು ಆಲೋಚನೆಗಳನ್ನು ಹೊತ್ತುಕೊಂಡು ಪಯಣಿಸುತ್ತಲೇ ಇರುತ್ತದೆ. ಇದೀಗ ಹಳಿಯ ಮೇಲೆ ಶರವೇಗದಲ್ಲಿ ಸಾಗಿದ ಬಂಡಿಯಂತೆ, ನೆನಪುಗಳು ಚಲಿಸುತ್ತಲೇ ಇವೆ. ಮನುಷ್ಯ ಬದುಕಿರುವುದೇ ನಿನ್ನೆಗಳ ನೆನಪುಗಳಲ್ಲಿ. ನಾಳೆಯ ಭರವಸೆಗಳಲ್ಲಿ. ಆದರೆ, ತನಗಿರುವುದು ಮನವನ್ನು ಹಿಂಡಿ ಹಿಪ್ಪೆ ಮಾಡುವ ಕಹಿ ನೆನಪುಗಳು ಮಾತ್ರ ಮಿನಾಲಿ ಮತ್ತು ಸಾರಂಗನನ್ನು ಕಳೆದುಕೊಂಡ ನೆನಪುಗಳು. ನಾಳೆ ಎಂಬುದರ ಆಸಕ್ತಿಯೂ ಇಲ್ಲ... ಆಸೆಯೂ ಇಲ್ಲ ಇನ್ನು ತನ್ನ ಜೀವನದಲ್ಲಿ ಏನು ಉಳಿದಿದೆ? ಏನು ಸಾರವಿದೆ... ಇದ್ದ ಚೈತನ್ಯವೆಲ್ಲವೂ ಮಿನಾಲಿ ಮತ್ತು ಸಾರಂಗ ತಮ್ಮೊಡನೆ ಪಡೆದೊಯ್ದರು. ತನ್ನನ್ನು ಕೂಡಾ ಆ ವಿಧಿ ಸೆಳೆದಿದ್ದರೆ, ನೆಮ್ಮದಿಯಂದ ಅವರೊಡನೆ ನಿರ್ಗಮಿಸಬಹುದಿತ್ತು. ಅವರನ್ನು ಕಳೆದುಕೊಂಡ ಪರಿಸರದಿಂದ ತಾನೇನೋ ಓಡಿ ಬಂದೆ. ಆದರೆ ಅವರ ನೆನಪುಗಳನ್ನು ಬಿಟ್ಟು ಬರಲು ಸಾಧ್ಯವಾಯಿತೇ? ಇಲ್ಲ ಅವನ್ನು ಸದಾ ತನ್ನೊಡನೆ ಹೊತ್ತೊಯ್ಯಲೇಬೇಕು... ಅವರು ನನ್ನ ಬದುಕಿನ ರಂಗದಲ್ಲಿ ತಮ್ಮ ಪಾತ್ರ ಮುಗಿಯಿತೆಂಬಂತೆ ಸರಿದುಹೋದರು. ತಾನು ಇನ್ನೂ ಇಲ್ಲಿದ್ದು ಒಂಟಿಯಾಗಿ ತನ್ನ ಭೂಮಿಕೆ ನಿಭಾಯಿಸಬೇಕಿದೆ..!

ಕಾಯಕನಾಥ ಅಲ್ಲಿ ಕುಳಿತಿರಲಾಗದೇ ಎದ್ದು ನಡೆಯತೊಡಗಿದ. ಎಷ್ಟು ದೂರ ಹೆಜ್ಜೆ ಹಾಕಿದನೋ, ಎಲ್ಲಿಗೆ ನಡೆದನೋ... ಗಮ್ಯವೇ ಇರದ ಅವನ ಬದುಕಿನಂತೆ, ದಿಕ್ಕೇ ಇಲ್ಲದ ಬೀಸುಗಾಳಿಯಂತೆ ನಡೆಯತೊಡಗಿದ್ದ. ಎಷ್ಟು ಹೊತ್ತು ನಡೆದನೋ, ಊರಿಂದ ಬಹಳ ದೂರ ಹೆಜ್ಜೆ ಹಾಕಿದ್ದ. ಆಗೊಮ್ಮೆ ಈಗೊಮ್ಮೆ ಅವನನ್ನು ಹಾದು ವಾಹನಗಳು ಸರಿದು ಹೋಗುತ್ತಿದ್ದವು. ಅವನಿಗೆ ಯಾವುದರತ್ತವೂ ಆಸಕ್ತಿ ಇಲ್ಲ. ಮನಸ್ಸಿನೊಳಗೆ ತುಂಬಿಕೊಂಡ ನಿರ್ವಾತ ಹೃದಯ, ಮನಸ್ಸನ್ನೂ ಕುರುಡಾಗಿಸಿತ್ತು.

## ಅಧ್ಯಾಯ 2

ವಿರಮಿಸಲು ಕುಳಿತ ಸ್ಥಳದ ಮುಂದೆ ಒಂದಷ್ಟು ಹುಲ್ಲುಹಾಸು, ಅದರಾಚೆ ಸಣ್ಣ ಗಿಡಗಂಟಿಗಳು... ಇನ್ನೂ ನೋಟ ಹರಿಸಿದಾಗ ಮರಗಿಡಗಳು ಆರಂಭಗೊಂಡಿದ್ದವು. ಅಲ್ಲಿನ ಪ್ರಶಾಂತತೆ, ಸಣ್ಣಗೆ ಬೀಸುತ್ತಿದ್ದ ತಂಪು ಗಾಳಿ ಮನಸ್ಸಿನ ಕುದಿಗೆ ಸಾಂತ್ವನ ಹೇಳಿ ಅವನನ್ನು ಕೈ ಬೀಸಿ ಕರೆದಂತಿತ್ತು. ಸಮಾಜದ ಜನರು, ಅಲ್ಲಿನ ವ್ಯವಸ್ಥೆ, ಸರಿಯಾದ ಸೌಕರ್ಯಗಳಿಲ್ಲದೇ ತನ್ನವರನ್ನು ಕಳೆದುಕೊಂಡ ದುಃಖ ಇದೆಲ್ಲದರ ಮೇಲಿನ ಸಾತ್ವಿಕ ಸಿಟ್ಟು, ಆಕ್ರೋಶ, ಒಳಗೆ ಹತ್ತಿಕ್ಕಲಾರದ ಸಂಕಟ, ನೋವು, ಜಿಗುಪ್ಸೆಯ ಮಿಶ್ರ ಭಾವ ಅವನನ್ನು ಇಷ್ಟು ದೂರ ಕರೆತಂದಿತ್ತು. ನಾಡಿಗಿಂತ ಕಾಡೇ ಹಿತವೆನಿಸಿ ಎದುರಿನ ಇಳಿಜಾರಿನ ಬಯಲಾಚೆ ಕಾಣುತ್ತಿದ್ದ ಕಾಡಿನತ್ತ ಹೆಜ್ಜೆ ಹಾಕತೊಡಗಿದ. ಕಿಚ್ಚು ಹಚ್ಚಿದ ಮನಸ್ಸು ಅಲ್ಲಿನ ಭೂರಮೆಯ ಹಸಿರೊಡಲಿಗೆ, ಬೀಸುವ ಮಂದ ಮಾರುತಕೆ ಸೋತು ಶರಣಾಗಿ ಯಾವುದೋ ಮಾಯಕದಲ್ಲಿ ಅವನನ್ನು ತನ್ನತ್ತ ಸೆಳೆದೊಯ್ಯುತ್ತಲೇ ಇತ್ತು. ಬಯಲು ದಾಟಿ, ಪೊದೆಗಿಡಗಂಟಿಗಳ ದಾಟಿ ನಡೆಯುತ್ತಲೇ ಇದ್ದ. ಕಾಡಿನೊಳಗೆ ಪ್ರವೇಶಿಸಿದ ಅರಿವು ಕೂಡಾ ಅವನಿಗೆ ಬಾರದೇಹೋಗಿತ್ತು.

ಕಾಯಕನಾಥನ ಬರಿ ಕಾಲುಗಳಿಗೆ ಗಿಡ ಗಂಟಿಗಳ ಮುಳ್ಳು, ಸಣ್ಣ ಕಲ್ಲುಗಳು ಹಾಸಿದಂತಿದ್ದ ನೆಲ ಚುಚ್ಚಿ ನೋವುಂಟು ಮಾಡಿದಾಗಲೇ ಅವನು ವಾಸ್ತವಕ್ಕೆ ಬಂದಿದ್ದ. ಅವನಿದ್ದ ಸ್ಥಳದ ಅರಿವು ಮೂಡಿಸಿತ್ತು. ಸುತ್ತಲೂ ಕಣ್ಣೂ ಹಾಯಿಸಿದೆಲ್ಲೆಡೆ ಆವರಿಸಿಕೊಂಡ ವಿವಿಧ ಜಾತಿಯ ಒತ್ತೊತ್ತಾಗಿ ಬೆಳೆದು ನಿಂತ ವಿವಿಧ ಪ್ರಜಾತಿಯ ಮರಗಳು... ಕೆಲವಂತೂ ದಟ್ಟವಾಗಿ ಹಬ್ಬಿ ಅವುಗಳಿಂದ ಬಿಳಲುಗಳು ಇಳಿದುಕೊಂಡಿದ್ದವು. ಮನುಷ್ಯನ ಸುಳಿವೇ ಇರದಂಥ ದಟ್ಟವಾದ ಕಾಡಿನ ಆತ್ಮದೊಳಗೆ ತಾನು ಸೇರಿಕೊಂಡಿದ್ದೇನೆ ಎನ್ನುವ ಪ್ರಜ್ಞೆ ಅವನಲ್ಲಾಗಲೇ ಉಂಟಾಗಿತ್ತು. ಎಲ್ಲೋ ಸುಪ್ತವಾಗಿ ಅವನೇ ಬಯಸಿದಂಥ ತಾಣ ಅದು. ಯಾವ ಮೋಡಿ, ಯಾವ ಶಕ್ತಿ ತನ್ನನ್ನು ಇಲ್ಲಿ ತಂದು ಸೇರಿಸಿತೋ? ನಗರದಲ್ಲಿರುವ ಮನುಷ್ಯನ ಮುಖವಾಡ ಧರಿಸಿದ ಅಲ್ಲಿನ ಸಿಮೆಂಟಿನ ಕಾಡಿಗಿಂತ ಪ್ರಕೃತಿಯ ಈ ಕಾಡ ಮಡಿಲು, ಇಲ್ಲಿಯ ಮೌನ ಮನಸಿಗೆಷ್ಟೋ ಹಿತ, ಮುದ ನೀಡುತ್ತಿದೆ ಎನಿಸಿತು. ಅವನ ಹೆಜ್ಜೆಗಳು ಆಯಾಚಿತವಾಗಿ ಕಾಡಿನ ಒಳಗೆ ಸಾಗುತ್ತಿತ್ತು. ಅಲ್ಲಿನ ಮರಗಳಿಂದ ಹರಡಿದ ಸುಗಂಧ ಮಿಳಿತವಾದ, ಮಣ್ಣಿನ ಘಾಟು ಹೊತ್ತು ಬೀಸಿದ ಪರಿಮಳ ಅವನಲ್ಲಿ ವಿಶೇಷ ಸಂವೇದನೆಯುಂಟು ಮಾಡಿತ್ತು. ಪ್ರಕೃತಿ ಮೈ ಮರೆತು ವಿಹರಿಸಿದಂಥ ಆ ನೋಟದ ಮಾಟಕ್ಕೆ ಅವನು ತನ್ಮಯನಾಗಿದ್ದ. ದುಃಖದ ಬೇಗೆಯಲ್ಲಿ ಬೆಂದುಹೋಗಿದ್ದ ಅವನ ಹೃದಯಕ್ಕೆ ಬೇಕಾದ ಸಾಂತ್ವನ ಅವನ ಬಂಧುಬಾಂಧವರು ನೀಡಲು ಅಸಮರ್ಥರಾಗಿದ್ದರು. ಆದರೆ ಆ ಶಕ್ತಿ ಅವನನ್ನು ಆವರಿಸಿಕೊಂಡ ಅಲ್ಲಿನ ಪ್ರಕೃತಿಗಿತ್ತು. ಅವನು ತನ್ನನ್ನೇ ತಾನು ಮರೆತವನಂತೆ ಹೆಜ್ಜೆ ಹಾಕುತ್ತಿದ್ದ. ಆ ಅವ್ಯಕ್ತ ಶಕ್ತಿಯೊಳಗೆ ಲೀನವಾಗುವಂತೆ ಅವನ ಹೆಜ್ಜೆಗಳು ಸಾಗುತ್ತಲೇ ಇದ್ದವು.

(ಸಶೇಷ)